45 ಶ್ರೀ ಪಾಟೀಲ್ ಎ.ಎಸ್(ನದಹಳ್ಳಿ) (ದೇವರ ಹಿಪ್ಪರಗಿ)
ಬಿ. ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ದೇವರ ಹಿಪ್ಪರಹಿ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಸರ್ಕಾರಿ ಸಮುದಾಯ, ಆರೋಗ್ಯ ಕೇಂದ್ರ, ಸರ್ಕಾರಿ ಆರೋಗ್ಯ, ಉಪ ಕೇಂದ್ರಗಳ ಸಂಖ್ಯೆ ಎಷ್ಟು?

ದೇವರ ಹಿಪ್ಪರಗಿ ಕ್ಷೇತ್ರದ ವ್ಯಾಪ್ತಿಯಲ್ಲಿ ಒಂದು ಸಮುದಾಯ ಆರೋಗ್ಯ ಕೇಂದ್ರ, 10 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 47 ಉಪಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಆ ಈ ಆಸ್ಪತ್ರೆಗಳಲ್ಲಿ ವಿವಿಧ ಹಂತಗಳ ಹುದ್ದೆಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ.

ಇ ಈ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮವೇನು (ಖಾಲಿ ಹುದ್ದೆಗಳ ಆಸ್ಪತ್ರೆವಾರು ವಿವರ ನೀಡುವುದು)?

ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 5021 ಅರೆವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು, ನೇಮಕಾತಿ ನಿಯಮಗಳ ಕರಡು ಅಧಿಸೂಚನೆಯನ್ನು ಆಕ್ಷೇಪಣೆ/ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ದಿನಾಂಕ:7–2–2009 ರಂದು ಹೊರಡಿಸಲಾಗಿದೆ. ಸದರಿ ನಿಯಮಗಳು ಅಂತಿಮಗೊಂಡ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಅಭ್ಯರ್ಥಿಗಳು ಲಭ್ಯವಾದ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು

(ಖಾಲಿ ಹುದ್ದೆಗಳ ಆಸ್ಪತ್ರೆವಾರು ವಿವರ ಪಟ್ಟಿ ಅನುಬಂಧ 1 ರಲ್ಲಿ ಲಗತ್ತಿಸಿದೆ)

ಈ ದೇವರ ಹಿಪ್ಪರಗಿ ಕ್ಷೇತ್ರದಲ್ಲಿ ಯಾವ ಯಾವ ಆಸ್ಪತ್ರೆಗಳು ಶಾಶ್ವತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ? ಶಾಶ್ವತ ಕಟ್ಟಡದಲ್ಲಿ ಕಾರ್ಯನಿರ್ವಹಿಸದಿರುವ ಆಸ್ಪತ್ರೆಗಳ ವಿವರ ನೀಡುವುದು?

1 ಸ.ಆ.ಕೇಂದ್ರ, 10 ಪ್ರಾ.ಆ.ಕೇಂದ್ರಗಳು ಹಾಗೂ 31 ಉಪಕೇಂದ್ರಗಳು ಶಾಶ್ವತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಮತ್ತು ಶಾಶ್ವತ ಕಟ್ಟಡದಲ್ಲಿ ಕಾರ್ಯನಿರ್ವಹಸದಿರುವ ಆಸ್ಪತ್ರೆಗಳ ವಿವರಗಳನ್ನು ಅನುಬಂಧ 1 ರಲ್ಲಿ ಸಲ್ಲಿಸಿದೆ.

ಉ ಹಾಗಿದ್ದಲ್ಲಿ, ಶಾಶ್ವತ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?

ಉಪ ಕೇಂದ್ರಗಳ ಶಾಶ್ವತ ಕಟ್ಟಡಗಳನ್ನು ಹಂತ ಹಂತವಾಗಿ ಹಾಗೂ ಅನುದಾನ ಲಭ್ಯತೆ ಆಧರಿಸಿ ನಿರ್ಮಿಸಲಾಗುವುದು.

ಅನುಬಂಧ – 1

- ಮಾನ್ಯ ವಿಧಾನ ಸಭೆಯ ಸದಸ್ಯರ ಹೆಸರು ಶ್ರೀಮಾನ್ ಎ.ಎಸ್.ಪಾಟೀಲ (ನಡಹಳ್ಳಿ) ಶಾಸಕರು. ದೇವರ ಹಿಪ್ಪರಗಿ ಮತ ಕ್ಷೇತ್ರ
- ವಿಧಾನ ಸಭೆಯ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 45

ದೇವರ ಹಿಪ್ಪರಗಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಆರೋಗ್ಯ ಕೇಂದ್ರಗಳ, ಉಪಕೇಂದ್ರಗಳ, ಕಟ್ಟಡಗಳ ಹಾಗೂ ವೈದ್ಯಾಧಿಕಾರಿಗಳ ಮಾಹಿತಿ

ಕ್ರ ಸಂ.	ದೇವರಹಿಪ್ಪರಗಿ ಮತ ಕ್ಷೇತ್ರದ ವ್ಯಾಪ್ತಿಗೆ ಬರುವ ಪ್ರಾ.ಆ.ಕೇಂದ್ರ/ ಸ.ಆ.ಕೇಂದ್ರಗಳು	ವೈದ್ಯಾಧಿಕಾರಿಗಳು			ಶಾಶ್ವತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಸ್ಪತ್ರೆಗಳ ಸಂಖ್ಯೆ	ಉಪಕೇಂದ್ರಗಳ ವಿವರ			ಷರಾ
		ಮಂಜೂರಾತಿ	ಕಾರ್ಯನಿರ್ವಹಿಸುತ್ತಿರುವ	ಖಾಲಿ		ಮಂಜೂರಾದ ಉಪಕೇಂದ್ರಗಳ ಸಂಖ್ಯೆ	ಶಾಶ್ವತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಉ.ಕೇಂದ್ರಗಳ ಸಂಖ್ಯೆ	ಶಾಶ್ವತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸದೇ ಇರುವ ಉ.ಕೇಂದ್ರಗಳ ಸಂಖ್ಯೆ	
ಸಿಂದಗಿ ತಾಲ್ಲೂಕು									
1	ಪ್ರಾ.ಆ.ಕೇಂದ್ರ, ದೇವರಹಿಪ್ಪರಗಿ	1	0	1	1	6	3	3	
2	ಪ್ರಾ.ಆ.ಕೇಂದ್ರ ಕೋರವಾರ	1	1	0	1	6	5	1	
3	ಪ್ರಾ.ಆ.ಕೇಂದ್ರ ಅಸ್ಕಿ	1	1	0	1	3	2	1	
4	ಸ.ಆ.ಕೇಂದ್ರ ಕಲಕೇರಿ	5	2	3	1	5	4	1	
ಬ.ಬಾಗೇವಾಡಿ ತಾಲ್ಲೂಕು									
5	ಪ್ರಾ.ಆ. ಕೇಂದ್ರ ಯಾಳವಾರ	1	1	0	1	5	4	1	

6	ಪ್ರಾ.ಆ. ಕೇಂದ್ರ ಕು.ಸಾಲವಾಡಗಿ	1	0	1	1	5	4	1	
7	ಪ್ರಾ.ಆ.ಕೇಂದ್ರ ಹೊ.ಹಿಪ್ಪರಗಿ	1	0	1	1	4	3	1	
8	ಪ್ರಾ.ಆ. ಕೇಂದ್ರ ವಡವಡಗಿ	1	1	0	1	3	2	1	
9	ಪ್ರಾ.ಆ.ಕೇಂದ್ರ ಸಾಸನೂರ	1	1	0	1	3	3	0	
ಮುದ್ದೇಬಿಹಾಳ ತಾಲ್ಲೂಕು									
10	ಪ್ರಾ.ಆ. ಕೇಂದ್ರ ಕಾರಿಗನೂರ	1	1	0	1	3	1	2	
11	ಪ್ರಾ.ಆ. ಕೇಂದ್ರ ಬಂಟನೂರ	1	1	0	1	4	0	4	
	ಒಟ್ಟು	**15**	**9**	**6**	**11**	**47**	**31**	**16**	